ತಿರುಮಲ ತಿರುಪತಿ ದೇವಸ್ಥಾನಗಳು

# ಬಾಲ ಸಪ್ತಗಿರಿ

ಸಚಿತ್ರ ಮಾಸಪತ್ರಿಕೆ

ಜುಲೈ 2020

**ಸಪ್ತಗಿರಿ ಅನುಬಂಧ**







ಸ್ವಾಮಿಯವರ ಮೆಟ್ಲೋತ್ಸವದಲ್ಲಿ ಬಾಲಕರ ಭಜನೆ

ತಿರುಮಲೆ ತಿರುಪತಿ ದೇವಸ್ಥಾನಗಳು

# ಬಾಲ ಸಪ್ತಗಿರಿ

ಸಪ್ತಗಿರಿ ಅನುಬಂಧ



ಸಂಪುಟ -01 ಜುಲೈ - 2020 ಸಂಚಿಕೆ -05

## ವಿಷಯ ಸೂಚಿಕೆ


| | | ಪುಟ |
|---|---|---|
| ಹಿಂದೂ ದೇವರು | ಚಕ್ರತ್ತಾಳ್ವಾರ್ -ಶ್ರೀಮತಿ. ಎನ್. ಪಾರ್ವತಿ | 04 |
| ಹನ್ನೆರಡು ಆಳ್ವಾರರು | ನಮ್ಮಾಳ್ವಾರರು - ಶ್ರೀಮತಿ. ಸಿ.ಎಸ್. ಊರ್ಮಿಳಾ | 06 |
| ಕನ್ನಡ ಹರಿದಾಸವರೇಣ್ಯರು | ಶ್ರೀ ರಾಘವೇಂದ್ರ ಸ್ವಾಮಿಗಳು - ಶ್ರೀಮತಿ. ಬಿ. ಪದ್ಮಜ | 08 |
| ಚಿತ್ರಕಥೆ | ಭಗವಂತನಿಗೆ ಮಾವ<br>ಕಥೆ - ಶ್ರೀನಿವಾಸ ದೀಕ್ಷಿತರು<br>ಚಿತ್ರಗಳು - ಪಿ. ಶಿವಪ್ರಸಾದ್ | 10 |
| ಬಾಲನೀತಿ | ಅವಸರ - ಒತ್ತಡ - ಬಿ. ಆರ್. ಶ್ರೀಕಂಠಯ್ಯ | 14 |
| ಪ್ರಜ್ಞಾವಂತ ಬಾಲಕಿ - | ಎ. ಅನಘ | 16 |
| ಕ್ವಿಜ್ | -ಶ್ರೀಮತಿ. ಸೂರ್ಯವಂಶಿ | 17 |
| ಚಿತ್ರಲೇಖನ | | 18 |


ಮುಖಚಿತ್ರ - ಶ್ರೀ ವ್ಯಾಸಮಹರ್ಷಿ

ಹಿಂಬದಿಚಿತ್ರ - ಶ್ರೀ ವೆಂಕಟೇಶ್ವರಸ್ವಾಮಿ



# ಚಕ್ರತ್ತಾಳ್ವಾರ್

ಮೂಲ: ಕೆ. ಸರ್ವೋತ್ತಮರಾವ್

-ಅನುವಾದ : ಶ್ರೀಮತಿ. ಪಾರ್ವತಿ

ಅಮ್ಮಾ! ಅಮ್ಮಾ!

'ಏನು?'

'ಅಮ್ಮಾ! ಒಂದು ಚಿಕ್ಕ ಸಂದೇಹ'

'ಏನೇ ಅದು ಸಂದೇಹ? ತಿಳಿದಿದ್ದರೇ ಹೇಳ್ತೀನಿ'

'ಅಮ್ಮಾ! ಶಿವನ ಆಯುಧ ಯಾವುದು?

''ಗಿರಿಜಾ ! ಶಿವನ ಅಯುಧ ತ್ರಿಶೂಲ''.

ಅಮಾ! ಸುಬ್ರಹ್ಮಣ್ಯೇಶ್ವರನ ಆಯುಧ?

ವೇಲಾಯುಧ ಎನ್ನುತ್ತಾರೆ.

ಅಮ್ಮಾ! ವಿಷ್ಣುವಿನ ಆಯುಧ?

'ಗಿರಿಜಾ! ಐದು ಆಯುಧಗಳು

ಅಮ್ಮಾ! ಅವು ಯಾವುವು ಹೇಳಮ್ಮಾ!

'ಗಿರಿಜಾ ! ಅಡಿಗೆ ಮನೆಯಲ್ಲಿ ನನಗೆ ತುಂಬಾ ಕೆಲಸವಿದೆ. ತಾತನನ್ನು ಕೇಳು ಹೇಳುತ್ತಾರೆ.

ತಾತ! ತಾತ!

ಏನಮ್ಮಾ ಏನೋ ಕೇಳಲು ಬಂದಿಯಾ? ಕೇಳಮ್ಮಾ!

ತಾತಾ! ವಿಷ್ಣುವಿನ ಆಯುಧದ ಹೆಸರುಗಳನ್ನು ಹೆಸರುಗಳನ್ನು ಹೇಳು?

ಆಯ್ತು ! ಕೇಳು ಶಂಖ, ಚಕ್ರ, ಗದೆ, ಕರವಾಲ, ಬಿಲ್ಲು

ತಾತಾ! ಅವುಗಳಿಗೆ ಹೆಸರುಗಳು ಇಲ್ಲವಾ?

ಇಲ್ಲದೇ ಏನು? ಶಂಖಕ್ಕೆ ಪಾಂಚ ಜನ್ಯವೆಂದೂ, ಗದೆಗೆ ಕೌಮೋದಕಿ ಎಂದು, ಕರವಾಲಕ್ಕೆ ನಂದಕ ಎಂದೂ ಹಾಗೂ ಬಿಲ್ಲಿಗೆ ಶಾರ್ಙ್ಗ ಎಂದು ಹೆಸರು.

ತಾತಾ! ತಾತಾ! ಚಕ್ರದ ಹೆಸರು ಹೇಳಿಲ್ಲವಲ್ಲಾ ತಾತಾ !

ತಾಳು ಹೇಳ್ತಿನಿ ವಿಷ್ಣುವಿನ ಐದು ಆಯುಧಗಳಲ್ಲಿ ಚಕ್ರವೇ ಪ್ರಸಿದ್ಧಿ ಹೊಂದಿರುವುದು. ಈ ಚಕ್ರವನ್ನು ಸುದರ್ಶನ ಚಕ್ರ ಎನ್ನುತ್ತಾರೆ. ವೈಷ್ಣವ ದೇವಾಲಯಗಳಲ್ಲಿ ಚಕ್ರತ್ತಾಳ್ವಾರ್ ಎಂಬ ಹೆಸರಿನಿಂದ ಪೂಜಿಸುತ್ತಾರೆ. ಕೆಲವು ದೇವಾಲಯಗಳಲ್ಲಿ ಪ್ರತ್ಯೇಕ ಸನ್ನಿಧಿಗಳು ಇರುತ್ತವೆ.

ತಾತಾ ಎಲ್ಲಾ ಆಯುಧಗಳಲ್ಲಿ ಚಕ್ರವು ಪ್ರಾಧಾನ್ಯವಾಗಿದೆ ಎಂದಿರಲ್ಲಾ, ಏಕೆ? ಅಮ್ಮಾ! ಸ್ವಾಮಿಯ ಆ ಚಕ್ರಾಯುಧದಿಂದಲೇ ಲೋಕದ ತೊಂದರೆಗಳನ್ನು ಸಂಹರಿಸಿದ್ದಾನೆ. ಆಪತ್ತಿನಲ್ಲಿ ಇರುವವರನ್ನು ಕಾಪಾಡಿದ್ದಾನೆ ಅಲ್ಲದೇ ಸ್ವಾಮಿಗೆ ಜರಗುವ ಉತ್ಸವಗಳನ್ನು ತಾನೆ ಮುಂದು ನಿಂತು ಸ್ವಾಮಿಗೆ ರಕ್ಷೆಯಾಗಿರುತ್ತಾನೆ.

ಶಿಶುಪಾಲನ ನೂರು ತಪ್ಪುಗಳನ್ನು ಗ್ರಹಿಸಿ ಕೊನೆಗೆ ಚಕ್ರಾಯುಧದಿಂದ ಆ

ಶಿಶುಪಾಲನನ್ನು ಕೃಷ್ಣನು ಸಂಹರಿಸಿದನು. ಈ ಕಥೆಯು ನಮ್ಮ ಕನ್ನಡ ಪುಸ್ತಕದಲ್ಲಿ ಚಿತ್ರ ಸಹಿತ ನೀಡಿದ್ದಾರೆ.ತಾತ!

ಗಿರಿಜಾ! ಒಬ್ಬ ಶಿಶುಪಾಲನನ್ನು ಅಲ್ಲ. ಸ್ವಾಮಿಯು ಚಕ್ರಾಯುಧದಿಂದ ಸುಮಾರು 20 ಬಾರಿ ದುಷ್ಟಶಿಕ್ಷಣ, ಶಿಷ್ಟರಕ್ಷಣೆ ಮಾಡಿದ್ದಾನೆ. ತಾತಾ! ಒಂದು ಕಥೆ ಹೇಳುವೆಯಾ? ನನ್ನ ಸಹ ಪಾಠಿಗಳಿಗೆಲ್ಲಾ ಹೇಳುತ್ತೇನೆ.

'ಗಿರಿಜಾ! ನಾನು ಹೇಳುವ ಕಥೆಯ ಹೆಸರು ಗಜೇಂದ್ರ ಮೋಕ್ಷ.

ಗಜೇಂದ್ರನೆಂದರೆ ಆನೆಗಳ ರಾಜ ಅಲ್ಲವಾ?

ಸರಿಯಾಗಿ ಹೇಳಿದೆ. ಒಂದು ಅಡವಿ ಯಿತ್ತು. ಆ ಕಾಡಿನಲ್ಲಿ ಗಜೇಂದ್ರನೇ ಬಲವಂತ ನಾಗಿದ್ದನು. ಆ ಆನೆಗೆ ದೊಡ್ಡ ಕುಟುಂಬವಿತ್ತು ಬೇಸಿಗೆಯಲ್ಲಿ ಗಜೇಂದ್ರನು ಜಲಕ್ರೀಡೆ ಆಡ ಬೇಕೆಂದು ಕೊಂಡಿತು. ಇಡೀ ಕುಟುಂಬವೇ ತೆರ ಳಿತು.

ಹೌದು ತಾತಾ ! ಟಿ.ವಿ.ಯಲ್ಲಿ ಆನೆಗಳು ಗುಂಪಿನಲ್ಲಿ ಘೀಂಕಾರ ಮಾಡುತ್ತಾ ಹೋಗು ವುದನ್ನು ನೋಡಿದ್ದೇನೆ.

ಗಿರಿಜ! ಪ್ರಾಣಿ ಪ್ರಪಂಚ ಸೀರಿಯಲ್ ನೋಡುತ್ತೀ ಎಂದಾಯಿತು! ಭೇಷ್! ಆ ಎಲ್ಲಾ ಆನೆಗಳೂ ಒಂದು ದೊಡ್ಡ ಸರೋವರದ ಹತ್ತಿರ ನಿಂತವು. ಘೀಂಕಾರ ಮಾಡುತ್ತಾ ಸೊಂಡಲಿನಿಂದ ನೀರು ಎರಚಿಕೊಳ್ಳುತ್ತಾ ತುಂಬಾ ಹೊತ್ತು ಸರೋವರವೆಲ್ಲಾ ಅಲ್ಲಕಲ್ಲೋಲ್ಲವಾಗಿ ಹೋಯ್ತು. ಮೊಸಳೆಯು ಆನೆಗಳ ಆಟವನ್ನು ನೋಡಿ, ತಾನೇನು, ತನ್ನ ಬಲ ಏನು ಎಂದು ತೋರಿಸ ಬೇಕೆಂದು ಕೊಂಡಿತು. ಗಜೇಂದ್ರನ ಕಾಲನ್ನು ಹಿಡಿದುಕೊಂಡಿತು. ಆನೆ ಅಲುಗಾಡಲು ಆಗ ಲಿಲ್ಲ ಕಾಲನ್ನು ಹಿಂತೆಗೆಯಲು ಆಗಲಿಲ್ಲ.

ತಾತ! ತಾತ! ನಮ್ಮ ಕನ್ನಡ ಪುಸ್ತಕದಲ್ಲಿ 'ನೀರಿನಲ್ಲಿನ ಮೊಸಳೆಯಿಂದ ಗಜೇಂದ್ರನ ಗರ್ವಭಂಗದ ಪದ್ಯ ಇದೆ.

ಹೌದು ಗಿರಿಜಾ ! ನೀನು ಹೇಳುವುದು ನಿಜ. ನೀರಿನಲ್ಲಿ ಮೊಸಳೆಯಿಂದ ಗಜೇಂದ್ರನ ಗರ್ವಭಂಗದ ಪದ್ಯ ಇದೆ.

ಹೌದು ಗಿರಿಜಾ ! ನೀನು ಹೇಳುವುದು ನಿಜ. ನೀರಿನಲ್ಲಿನ ಮೊಸಳೆಗೆ ಹೆಚ್ಚು ಶಕ್ತಿ ಇದೆ ಆ ಬಲದ ಮುಂದೆ ಇತರ ಪ್ರಾಣಿಗಳ ಬಲ ಕ್ಷೀಣ ವಾಗುತ್ತದೆ.

ತಾತಾ! ಆನೆಗೆ ಏನಾಯಿತು?

ಹೇಳ್ತೀನಿ! ಹೇಳ್ತೀನಿ! ಗಜೇಂದನು ತುಂಬಾ ಹೊತ್ತು ಹೋರಾಡಿದನು. ಕುಟುಂಬವು ಏನೂ ಮಾಡಲಾಗಲು ಆಗಲಿಲ್ಲ. ಕೊನೆಗೆ ವಿಷ್ಣುವೇ ರಕ್ಷಿಸೆನೆಂದು "ಸೃಷ್ಟಿಕರ್ತನಾದ ಭಗವಂತ ನಿನಗೆ ಶರಣು ಎಂದು ಪ್ರಾರ್ಥಿಸಿತು.

ತಾತ! ದಿನವೂ ನಮ್ಮ ಶಾಲೆಯಲ್ಲಿ ಇದೇ ಪ್ರಾರ್ಥನೆ. ಈ ಪದ್ಯವು ಗಜೇಂದ್ರ ಮೋಕ್ಷ ಪಾಠ ದಲ್ಲಿದೆ. ತಾತ ! ನಂತರ ಏನಾಯಿತು.

ಗಿರಿಜಾ! ಭಗವಂತ ಕರುಣಾಮಯಿ, ಯಾರಾದರೂ ಭಕ್ತರು ಕಷ್ಟದಲ್ಲಿದ್ದರೆ ಅವರನ್ನು ಸುಮ್ಮನೆ ಬಿಡುವುದಿಲ್ಲ. ಗಜೇಂದ್ರನ ಮೊರೆಯನ್ನು ಕೇಳಿ ಸರೋವರದ ಬಳಿಗೆ ಬಂದನು. ಗಜೇಂದ್ರನ ದುಃಸ್ಥಿತಿಯನ್ನು ಕಂಡನು. ಮೊಸಳೆಯ ಶಕ್ತಿಯನ್ನು ಗ್ರಹಿಸಿದನು. ತಕ್ಷಣವೇ ಚಕ್ರಾಯುಧವನ್ನು ಪ್ರಯೋ ಗಿಸಿದನು. ಆ ಚಕ್ರವು ತಿರುಗುತ್ತಾ ಮೊಸಳೆಯ ದೇಹವನ್ನು ತಾಕಿತು. ದೇಹದಿಂದ ಶಿರವನ್ನು ಬೇರೆ ಮಾಡಿತು. ಆನೆಯು ಪರಮಾನಂದದಿಂದ ಪರಂಧಾಮಾ! ಆರ್ತತ್ರಾಣಾ ಪರಾಯಣಾ! ಪರಂಧಾಮಾ ! ಎಂದು ಸ್ತುತಿಸಿತು.

ಇಂತಹ ಕಥೆಗಳು ಬಹಳ ಇವೆ! ನೀನು ಈಗ ಶಾಲೆಗೆ ಹೊರಡು ಸಾಯಂಕಾಲ ನರಕಾಸುರವಧೆಯಂತಹ ಕಥೆಗಳನ್ನು ಹೇಳುತ್ತೇನೆ.

ಆಯಿತು!

ಗಿರಿಜಾ! ಬಾ ತಿಂಡಿ ಸಿದ್ಧವಿದೆ.

ಅಮ್ಮನ ಕೂಗನ್ನು ಕೇಳಿ ಗಿರಿಜಾ ತಿಂಡಿ ತಿನ್ನಲು ಒಳಗೆ ಹೋದಳು...

# ನಮ್ಮಾಳ್ವಾರರು

ಶ್ರೀಮತಿ.ಸಿ.ಎಸ್. ಊರ್ಮಿಳಾ



**ಜನನ :** ಕಲಿಯುಗದ 43 ನೇ ದಿನ ಪ್ರಮಾದಿ ಸಂವತ್ಸರ ವೃಷಭ (ವೈಕಾಶಿ)ಮಾಸ ಪೌರ್ಣಮಿ ಶುಕ್ರವಾರ, ವಿಶಾಖ ನಕ್ಷತ್ರ, ವಿಶ್ವಕ್ಸೇನರ ಅಂಶ. ಸ್ಥಳ. ತಿರುಕುರುಹೂರ್.

ನಮ್ಮಾಳ್ವಾರರು ಆಳ್ವಾರರ ಗೋಷ್ಠಿಯಲ್ಲಿ ಅಗ್ರಸ್ಥಾನದಲ್ಲಿದ್ದಾರೆ ತಮಿಳುನಾಡಿನ ಆಳ್ವಾರ್ ತಿರುನಗರಿ ಎಂಬ ಊರಿನಲ್ಲಿ ಕಾರಿ ಮತ್ತು ಉಡೈಯನಂಗೈ ಎಂಬ ದಂಪತಿಗಳಿಗೆ ನಮ್ಮಾಳ್ವಾರರು ಜನಿಸಿದರು. ಇವರು ಚತುರ್ಥವರ್ಣದಲ್ಲಿ ಜನಿಸಿದರು. ಇವರು ವಿಶ್ವಕ್ಸೇನರ ಅಂಶವಾಗಿ ಜನಿಸಿ ಶಠ ಎಂಬ ವಾಯುವನ್ನು ತಡೆದರು. ಆದ್ದರಿಂದ (ಶಠ ಅಜ್ಞಾನ ವೆಂಬ ವಾಯು) ಇವರಿಗೆ ಶಠಗೋಪ ಎಂದೇ ಹೆಸರಾಯಿತು. ಪ್ರಾಕೃತ ಶಿಶುವಾಗಿ ಹುಟ್ಟಿದ ಕೆಲವು ದಿನಗಳಾದರೂ ಈ ಮಗುವು ತಾಯಿಯ ಹಾಲನ್ನೇ ಕುಡಿಯಲಿಲ್ಲ. ಈ ಅಚ್ಚರಿಯನ್ನು ಕಂಡ ತಂದೆತಾಯಿಯವರು ಮಗು ಮಾರನ್‌ನ್ನು ಹುಟ್ಟಿದ ಹನ್ನೆರಡನೆಯ ದಿನ ಆಳ್ವಾರ್ ತಿರುನಗರಿ ಯಲ್ಲಿರುವ "ಆದಿಪಿರಾನ್ ದೇವಾಲಯದಲ್ಲಿ ಇಟ್ಟು ಹೊರಟು ಹೋದರು. ಆ ಮಗುವು ದೇವಾಲಯದ ಪಕ್ಕದಲ್ಲಿದ್ದ ಹುಣಿಸೇ ಮರದ ಕೆಳಗೆ ಭಗ ವಂತನ ಧ್ಯಾನ ಮಾಡುತ್ತಾ ಕುಳಿತ್ತಿದ್ದರು. ಆಶ್ಚರ್ಯವೇನೆಂದರೆ ಆ ಹುಣಿ ಸೇಮರವು ಹಗಲೂ ರಾತ್ರಿ ಆಳ್ವಾರ್‌ಗೆ ಸೇವೆ ಮಾಡುತ್ತಿತ್ತು. ಆದ್ದರಿಂದ ಮರಕ್ಕೆ "ಉರಂಗಾಪ್ಪುಳಿ" ಎಂದು ಹೆಸರಾಯಿತು.(ಇದರ ಅರ್ಥ ಎಲೆಗಳು ಯಾವಾಗಲೂ ಎಚ್ಚೆತ್ತು ಕೊಂಡು ನಮ್ಮಾಳ್ವಾರರ ಸೇವೆಸಲ್ಲಿಸಿತು ಎಂದು)

ಅಚ್ಚರಿ ಏನೆಂದರೆ ಇದರ ಎಲೆಗಳು ಇಂದಿಗೂ ನಿದ್ರಿಸುವುದಿಲ್ಲ, (ರಾತ್ರಿಯ ವೇಳೆ ಮುದುಡುವುದಿಲ್ಲ ) ಮರದ ಕೆಳಗೆ ನಮ್ಮಾಳ್ವಾರರ ವಿಗ್ರಹವಿದೆ. ಭಕ್ತರು ಇಂದಿಗೂ ಅಲ್ಲಿಗೆ ಹೋಗಿ ದರ್ಶನ ಮಾಡುವರು. ಹೀಗೆಯೇ ಹದಿನಾರುವರ್ಷ ನಮ್ಮಾಳ್ವಾರರು ಧ್ಯಾನಮಗ್ನರಾಗಿ ಹುಣೇಸೇ ಮರದಡಿ ಯಲ್ಲಿದ್ದರು.ನಂತರ ಮಧುರಕವಿಆಳ್ವಾರರು ತೀರ್ಥಯಾತ್ರೆ ಮಾಡಿ ಕೊಂಡು ತಿರುನಗರಿಗೆ ಬಂದು ಯೋಗನಿದ್ರೆಯಲ್ಲಿದ್ದ ನಮ್ಮಾಳ್ವಾರರನ್ನು ಎಚ್ಚಿಸಿದರು. ನಮ್ಮಾಳ್ವಾರರು 36 ಕ್ಷೇತ್ರಗಳ ಭಗವಂತನ ದಿವ್ಯ ಮೂರ್ತಿ ಗಳನ್ನು ಕುಳಿತಲ್ಲೇ ದರ್ಶಿಸಿ ಮಂಗಳಾಶಾಸನ ಮಾಡಿದರು ಎಂಬ ಪ್ರತೀತಿ ಇದೆ. ವಿಷ್ಣುವಿನ ದೇವಾಲಯಗಳಲ್ಲಿ ಶಠಾರಿ ಸೇವೆ (ಅಂದರೆ ಶಠಾರಿ ಯನ್ನು ಭಕ್ತರ ತಲೆಗೆ ಒತ್ತುವ ಪದ್ಧತಿ) ಇಂದಿಗೂ ಇವೆ. (ನಮ್ಮಾಳ್ವಾರರ ಪಾದ ಕಮಲಗಳನ್ನು) ಶ್ರೀ ವೈಷ್ಣವ ಸಂಪ್ರದಾಯದಲ್ಲಿ ನಮ್ಮಾಳ್ವಾರರನ್ನು ಪ್ರಪನ್ನ ಜನಕೂಟಸ್ಥ ಎಂದು ಆಚಾರ್ಯರು ಕೀರ್ತಿಸಿದ್ದಾರೆ. ಇದರಿಂದ ಯಾವುದೇ ಕಾರಣಕ್ಕೂ "ಜಾತಿ ಮುಖ್ಯವಲ್ಲ ಗುಣಮುಖ್ಯ" ಎಂಬುದನ್ನು ನಮ್ಮಾಳ್ವಾರರ ಜೀವನದಿಂದ ನಾವು ಅರಿತುಕೊಳ್ಳಬಹುದು.ಇವರು ತಿರುವಿರುತ್ತಂ, ತಿರುವಾಶಿರಿಯಂ, ಪೆರಿಯತಿರುವಂದಾದಿ ಮತ್ತು ತಿರು ವಾಯ್ಮೊಳಿ ಎಂಬ ಕೃತಿಗಳನ್ನು ರಚಿಸಿದ್ದಾರೆ. ಇವು ಕ್ರಮವಾಗಿ ಋಗ್ವೇದ, ಯಜುರ್ವೇದ, ಅಥರ್ವಣವೇದ, ಸಾಮವೇದಗಳ ಸಾರ ವೆಂದು ಪರಿಗಣಿಸಲಾಗಿದೆ.

ನಮ್ಮಾಳ್ವಾರರು ರಚಿಸಿದ ತಿರುವಾಯ್ಮೊಳಿಯ ಒಂದು ಪಾಶುರ. ಉರ್ಯವರ ಉಯರ್‌ನಲಮ್ ಉಡೈಯವನ್ ಯವನವನ್ ಮಯ ರ್ವರ ಮದಿನಲಮ್ ಅರುಳಿನನ್ ಯವನವನ್ ಅಯರ್ವರುಮ್ ಅಮ ರರ್ಗಳ್ ಅಧಿಪತಿ ಯವನವನ್ ತುಯರರು ಶುಡರಡಿ ತೊಳುಡೆಳೆನ್ಮ ನನೇ ನಾಥಮುನಿಗಳು ಶ್ರೀ ಶಠಗೋಪರ ಕೃತಿಗಳನ್ನು ದ್ರಾವಿಡವೇದ ವೆಂದು ಸ್ತುತಿಸಿದ್ದಾರೆ.

# ಮಹಾಮಹಿಮರು

# ಶ್ರೀ ರಾಘವೇಂದ್ರ ಸ್ವಾಮಿಗಳು

-ಶ್ರೀಮತಿ. ಪದ್ಮಜ



ಪೂಜ್ಯಾಯ ರಾಘವೇಂದ್ರಾಯ
ಸತ್ಯಧರ್ಮರತಾಯಚ
ಭಜತಾಂ ಕಲ್ಪವೃಕ್ಷಾಯ
ನಮತಾಂ ಕಾಮಧೇನವೇ॥

ಮಕ್ಕಳೇ! ನಿಮಗೆ ಗುರುರಾಘವೇಂದ್ರಸ್ವಾಮಿಗಳ ಬಗ್ಗೆ ತಿಳಿದಿದೆಯೇ? ಇಲ್ಲವಾದಲ್ಲಿ, ಈಗ ಅವರ ಬಗ್ಗೆ ಕೆಲವೊಂದು ವಿಷಯಗಳನ್ನು ತಿಳಿದು ಕೊಳ್ಳೋಣ ಬನ್ನಿ.

'ದೇವರೆಂದರೆ ನಮ್ಮ ತಿಮ್ಮಪ್ಪ' ಗುರುಗಳೆಂದರೆ ನಮ್ಮ ರಾಘಪ್ಪ' ಎಂದು ಅನೇಕ ಕಾಲದಿಂದಲೂ ಹಿರಿಯರು ಹೇಳುತ್ತಾ ಬಂದಿದ್ದಾರೆ. ಏಕೆಂದರೆ ಶ್ರೀ ರಾಘವೇಂದ್ರಸ್ವಾಮಿಗಳು ಸದಾ ಸದ್ಭಕ್ತರ ಕೈಹಿಡಿದು ನಡೆಸುತ್ತಾರೆ. ಈಗಲೂ ಅವರು ನೆಲೆಸಿರುವ 'ಮಂತ್ರಾಲಯ' ಪುಣ್ಯ ಕ್ಷೇತ್ರದಲ್ಲಿ ಅನೇಕ ಪವಾಡಗಳನ್ನು ಕಾಣಬಹುದು ಕೇವಲ ಮಂತ್ರಾಲಯದಲ್ಲೇ ಅಲ್ಲಾ, ಎಲ್ಲಾದರೂ ಅವರ ಭಕ್ತರು ತಮ್ಮ ಕಷ್ಟಕಾಲದಲ್ಲಿ ಸ್ಮರಿಸಿದಾಗ ಕೂಡಲೇ ಅವರ ಸಹಾಯಕ್ಕಾಗಿ ಧಾವಿಸಿ ಕೃಪೆ ತೋರುವಂತಹಾ ಮಹನೀಯರು.

ಇಂತಹಾ ಮಹಾನುಭಾವರಾದ ರಾಘವೇಂದ್ರರ ಮೊದಲ ಹೆಸರು 'ವೇಂಕಟನಾಥ' ಅವರ ತಂದೆ ತಿಮ್ಮಣ್ಣ ಭಟ್ಟರು. ಹಾಗೂ ತಾಯಿ ಗೋಪಿಕಾಂಬ. ಇವರು ತಿರುಮಲೆಯ ಶ್ರೀನಿವಾಸನಲ್ಲಿ ಬೇಡಿಕೊಂಡ ಮೇಲೆ ಇವರಿಗೆ ಒಂದು ಗಂಡು ಮಗು ಹುಟ್ಟಿತು. ಆ ಮಗು ಶ್ರೀನಿವಾಸನ ಕೃಪೆಯಿಂದ ಜನಿಸಿದ್ದರಿಂದ ಆ ಮಗುವಿಗೆ ವೇಂಕಟನಾಥ ಎಂದು ನಾಮಕರಣ ಮಾಡಿದರು.

ವೇಂಕಟನಾಥ ಬಾಲ್ಯದಿಂದಲೂ ಅತ್ಯಂತ ಬುದ್ಧಿವಂತ ಚುರುಕು ವಿದ್ಯಾರ್ಥಿ. 'ಏಕ ಸಂಥಾಗ್ರಾಹಿ' ಏಕಸಂಥಾಗ್ರಾಹಿ ಅಂದರೆ ಒಮ್ಮೆ ಹೇಳಿಕೊಟ್ಟದ್ದನ್ನು ಕೂಡಲೇ ತಿಳಿದುಕೊಳ್ಳುವುದು ಎಂದರ್ಥ. ಹಾಗೆಯೇ ವೇದಗಳನ್ನು ಕರತಲಾ ಮಲಕ ಮಾಡಿಕೊಂಡಿದ್ದರು. ಹಾಗೆಯೇ ವೀಣೆ ನುಡಿಸುವುದರಲ್ಲೂ ಅತ್ಯಂತ ಪ್ರವೀಣರು. ಅವರ ಕುಲಗುರುಗಳು ಶ್ರೀ ಸುಧೀಂದ್ರ ತೀರ್ಥರು. ಅವರ ಮಾರ್ಗದರ್ಶನದಲ್ಲೇ ವಿದ್ಯಾಭ್ಯಾಸ ಮುಂದುವರೆಸಿದರು.

ವಯಸ್ಕರಾದ ಮೇಲೆ ವೇಂಕಟನಾಥರಿಗೆ 'ಸರಸ್ವತಿ' ಎಂಬ ಕನ್ಯೆಯನ್ನು ಕೊಟ್ಟು ಮದುವೆ ಮಾಡಿದರು. ಅವರಿಗೆ ಒಬ್ಬ ಮಗನೂ ಹುಟ್ಟಿದ ಕೆಲವರ್ಷಗಳ ನಂತರ ಅವರ ಗುರುಗಳ ಆದೇಶದಂತೆ ಸನ್ಯಾಸ ವನ್ನು ಸ್ವೀಕರಿಸಿದರು. ಅವರು 'ಭಕ್ತಪ್ರಹ್ಲಾದ' ರ ನಂತರ ವ್ಯಾಸ ತೀರ್ಥ ರಾಗಿ ಜನಿಸಿ, ನಂತರ ಶ್ರೀರಾಘವೇಂದ್ರರಾಗಿ ಜನಿಸಿದಂತಹ ಮಹಾ ನುಭಾವರು. ಇವರೇ ದ್ವಾಪರಯುಗದಲ್ಲಿ 'ಬಾಹ್ಲೀಕರಾಜ' ಎಂಬ ರಾಜನಾಗಿಯೂ ಅವತರಿಸಿದ್ದರು. ಇವರ ಮಹಿಮೆಗಳು ಅಪಾರ, ಅವರು ತೀರ್ಥ ಪ್ರೋಕ್ಷಣೆ ಮಾಡಿದರೆ ಎಲ್ಲಾ ಖಾಯಿಲೆಗಳೂ ವಾಸಿಯಾಗು ತ್ತಿದ್ದುವು. ಅವರನ್ನು ಪರೀಕ್ಷಿಸಲು ಒಬ್ಬ ಮುಸಲ್ಮಾನ ರಾಜ,ಹರಿವಾಣದಲ್ಲಿ ಮಾಂಸ ಭಕ್ಷ್ಯಗಳನ್ನು ಇರಿಸಿ, ಅದನ್ನು ಬಟ್ಟೆಯಿಂದ ಮುಚ್ಚಿ,ತನ್ನ ಅರ ಮನೆಗೆ ರಾಘವೇಂದ್ರ ಸ್ವಾಮಿಗಳನ್ನು ಆಹ್ವಾನಿಸಿ, ಅದನ್ನು ಸ್ವೀಕರಿಸಿ, ಅದರಲ್ಲಿ ಕೇವಲ ಹಣ್ಣುಹಂಪಲುಗಳು ಇವೆ ಎಂದು ಸುಳ್ಳು ಹೇಳಿದ ಕೂಡಲೇ ರಾಘವೇಂದ್ರರು ಆ ತಟ್ಟೆಯ ಮೇಲೆ ನೀರನ್ನು ಪ್ರೋಕ್ಷಣೆ ಮಾಡಿ ಅದರಲ್ಲಿ ಹಣ್ಣು ಹಂಪಲುಗಳೇ ಇದ್ದುವು. ಅದೇ ರೀತಿ ಒಮ್ಮೆ, ಮರಣಿಸಿದ್ದ ಮಗುವನ್ನು ತೀರ್ಥ ಪ್ರೋಕ್ಷಣೆ ಮಾಡಿ ಬದುಕಿಸಿದರು. ಅನೇಕ ಮಹಿಮೆ ಗಳನ್ನು ತೋರುತ್ತಾ ಧರ್ಮವನ್ನು, ಹರಿಭಕ್ತಿಯನ್ನು ಸಾರುತ್ತಾ ಅನೇಕ ಕಡೆಗಳಲ್ಲಿ ಸಂಚರಿಸಿ,ಕೊನೆಗೆ ಸಜೀವರಾಗಿ ಬೃಂದಾವನವನ್ನು ಪ್ರವೇಶಿ ಸಿದರು. ಆಗ ಶ್ರಾವಣಮಾಸದ ಶುದ್ಧ ಪಾಡ್ಯಮಿಯಾಗಿತ್ತು. ಹಿಂದೆ ಒಮ್ಮೆ ಅವರ ಜಾತಕ ನೋಡುವುದಕ್ಕೆ ಮೂವರು ಪಂಡಿತರು ಬಂದಿದ್ದರು. ಅವರಲ್ಲಿ ಒಬ್ಬರು, ಇವರಿಗೆ ನೂರು ವರ್ಷ ಆಯಸ್ಸು ಎಂದಿದ್ದರು. ಇನ್ನೊ ಬ್ಬರು ಮೂನ್ನೂರು ವರ್ಷ ಎಂದರೆ ಮತ್ತೊಬ್ಬರು ಏಳುನೂರು ವರ್ಷಗಳು ಎಂದಿದ್ದರು. ಇದರ ಅರ್ಥ ಅವರ ಶರೀರ ನಮಗೆ ಕಾಣುವುದು ನೂರು ವರ್ಷ, ಅವರು ರಚಿಸಿರುವ ಗ್ರಂಥಗಳಿಗೆ ಮುನ್ನೂರು ವರ್ಷ ಹಾಗೆಯೇ ಅವರು ಬೃಂದಾವನದಲ್ಲಿದ್ದ ನಮ್ಮನ್ನೆಲ್ಲಾ ಅನುಗ್ರಹಿಸುವುದು ಏಳುನೂರು ವರ್ಷಗಳು ಎಂದು ತಿಳಿಸಿದರು. ಹಾಗೆಯೇ ಅವರ ಬೃಂದಾವನದ ಮೃತ್ತಿಕೆಯನ್ನು ಧರಿಸಿದವರಿಗೆ ಯಾವ ದುಷ್ಟಗ್ರಹಗಳ, ರೋಗಗಳ ಬಾಧೆ ಇರುವುದಿಲ್ಲ.


ಅದ್ದರಿಂದ ಮಕ್ಕಳೇ ಆ ಸದ್ಗುರುಗಳು ತಿಳಿಸಿಕೊಟ್ಟಿರುವ ಸನ್ಮಾರ್ಗ ದಲ್ಲಿ ನಡೆದು ಅವರಂತೆ ಜ್ಞಾನಿಗಳಾಗಲು ಪ್ರಯತ್ನಿಸಿ,ಲೋಕ ಕಲ್ಯಾಣ ಕ್ಕಾಗಿ ಅವರು ತಮ್ಮನ್ನೇ ತೊಡಗಿಸಿಕೊಂಡ ದಾರಿಯನ್ನು ಅನುಸರಿಸಿ, ಶ್ರೀ ರಾಘವೇಂದ್ರಸ್ವಾಮಿಗಳ ಕೃಪಾಕಟಾಕ್ಷಕ್ಕೆ ಪಾತ್ರರಾಗಿ ನೂರ್ಕಾಲ ಚೆನ್ನಾಗಿ ಬಾಳಿ.


॥ ಓಂ ಶ್ರೀ ರಾಘವೇಂದ್ರಾಯ ನಮಃ॥


ಚಿತ್ರಕಥೆ


# ಭಗವಂತನಿಗೇ ಮಾವ


ಕಥೆ:ತೆಲುಗು ಮೂಲ : ಡಿ.ಶ್ರೀನಿವಾಸ ದೀಕ್ಷಿತರು
ಅನುವಾದ : ಶ್ರೀಮತಿ
ಚಿತ್ರಗಳು : ಪಿ. ಶಿವಪ್ರಸಾದ್




ಈ ಜೋಡಿಯನ್ನು ನೋಡುತ್ತಲೇ ಆಳ್ವಾರರಿಗೆ ಕೋಪವುಕ್ಕಿ ಬಂದಿದೆ.
"ಈ ಪುಂಡರಿಗೆ ತಕ್ಕ ಪಾಠ ಕಲಿಸಬೇಕು."
"ಓಯ್! ಯಾರು ನೀವು? ತೋಟವನ್ನೇಕೆ ಹಾಳುಗೆಡವುತ್ತಿದ್ದೀರಿ"


"ಹಾಗೇ ಆಗಲಿ ಸ್ವಾಮಿ."
'ಲಕ್ಷ್ಮೀ ಓಡೋಡು... ತೋಟದ ಮಾಲಿ ಬರುತ್ತಿದ್ದಾನೆ. ಹಿಡಿದುಕೊಳ್ಳುತ್ತಾನೆ.. ಓಡು... ಓಡು."


ಓಡಿ ಹೋಗುತ್ತಿರುವ ಜೋಡಿಯನ್ನು ಹಿಡಿಯಲು ಅನಂತಾಳ್ವಾರರು ಅವರ ಬೆನ್ನೆತ್ತಿದ್ದಾರೆ. ಆದರೆ ಸ್ವಾಮಿ ಅದ್ದೇಗೋ ತಪ್ಪಿಸಿಕೊಂಡು ಪಾರಾಗಿದ್ದಾನೆ. ಆದರೆ ಲಕ್ಷ್ಮೀ ಮಾತ್ರ ಕೈಗೆ ಸಿಕ್ಕು ಬಿಟ್ಟಿದ್ದಾಳೆ.
"ನನ್ನನ್ನು ನಿನ್ನ ಮಗಳೆಂದು ಕೋ. ದಯಮಾಡಿ ನನ್ನನ್ನು ಬಿಟ್ಟು ಬಿಡು.. ಇನ್ನೆಂದಿಗೂ ಇಲ್ಲಿಗೆ ಬರುವುದಿಲ್ಲ!"
"ಷ್! ಮಾತನಾಡಬೇಡ. ನನ್ನ ಈ ಶಲ್ಯದಿಂದ ನಿನ್ನನ್ನು ಈ ಸಂಪಿಗೆ ಮರಕ್ಕೆ ಕಟ್ಟಿ ಹಾಕುತ್ತಿದ್ದೇನೆ. ನಿನ್ನ ಪತಿ ಬಂದು ನಿನ್ನನ್ನು ಬಿಡಿಸಿಕೊಂಡು ಹೋಗಲಿ"


"ನನ್ನ ಸ್ವಾಮಿಗೆ ಮಾಲೆಕಟ್ಟಿ ಸಮರ್ಪಿಸಬೇಕಾದ ಹೂಗಳನ್ನು ನಿನ್ನ ಮುಡಿಯಲ್ಲಿ ಮುಡಿದಿರುವೆಯಾ? ನಿನ್ನಗೆ ನಾಚಿಕೆಯಾಗುವುದಿಲ್ಲವೇ?
"ತಂದೆ ಇನ್ನೆಂದಿಗೂ ಹೀಗೆ ಮಾಡುವುದಿಲ್ಲ. ಈ ದಿಕ್ಕಿಗೆ ಸಹಾ ಬರಲಾರೆನು. ನನ್ನು ಬಿಟ್ಟು ಬಿಡು.
ಸಂಪಿಗೆ ಮರಕ್ಕೆ ಮಹಾಲಕ್ಷ್ಮಿಯನ್ನು ತನ್ನ ಶಲ್ಯದಿಂದ ಕಟ್ಟಿ ಹಾಕಿ ಆಕೆಯ ಎದುರಿಗೇ ಕುಳಿತು ಹಾಡುಗಳನ್ನು ಹೇಳುತ್ತಾ ಕಾವಲಿನಂತೆ ಕಾಯುತ್ತಿದ್ದಾರೆ ಆಳ್ವಾರರು..
ಲಕ್ಷ್ಮಿ.... "ಆತನು ನನ್ನನ್ನು ಬಿಟ್ಟು ನಿನ್ನನ್ನು ಹಿಡಿದಿದ್ದಾನಲ್ಲವೇ. ಇರು"
ಸುಪ್ರಭಾತಸೇವೆ ಸಲುವಾಗಿ ಗುಡಿಗೆ ಬಂದ ಅರ್ಚಕರು ಭಗವಂತನ ಹೃದಯದ ಮೇಲೆ ಮಹಾಲಕ್ಷ್ಮಿ ಇಲ್ಲದಿರುವುದನ್ನು ಕಂಡು ಕಂಗಾಲಾಗಿದ್ದಾರೆ. ಅನಂತಾಚಾರ್ಯರ ತೋಟದ ಬಳಿ ಲಕ್ಷ್ಮಿ ಬಂಧಿತಳಾಗಿದ್ದಾಳೆ. ನೀವು ಹೋಗಿ ತಾಳಮೇಳಗಳೊಡನೆ ಈಗಲೇ ಆಕೆಯನ್ನು ಕರೆತನ್ನಿ." ಎಂದುಸ್ವಾಮಿ ಆದೇಶಿಸಿದ್ದಾನೆ. ಅರ್ಚಕರು ಹೋಗಿ ಆಳ್ವಾರರಿಗೆ ಎಲ್ಲಾ ವಿಷಯವನ್ನು ತಿಳಿಸಿದ್ದಾರೆ.ಆಗ ಆಳ್ವಾರರು..
"ಅಮ್ಮಾ!ನನ್ನನ್ನು ಕ್ಷಮಿಸು.ನಿನ್ನನ್ನು ಬಂಧಿಸಿ ಮಹಾಪರಾಧವನ್ನೇ ಮಾಡಿದ್ದೇನೆ. ಕರುಣಿಸು!
ದೊಡ್ಡ ಹೂಬುಟ್ಟಿಗಳಲ್ಲಿ ಮದುಮೆಗಳಂತೆ ಅಲಂಕರಿಸಿದ ಅಮ್ಮನವರನ್ನು ಕೂರಿಸಿ, ಆ ಬುಟ್ಟಿಯನ್ನು ತಮ್ಮ ತಲೆಮೇಲೆ ಹೊತ್ತು ಗುಡಿಗೆ ನಡೆದಿದ್ದಾರೆ ಆಳ್ವಾರರು."
"ಸ್ವಾಮಿ ನನ್ನನ್ನು ಮನ್ನಿಸಿ. ಮಹಾಲಕ್ಷ್ಮಿಯನ್ನು ಸ್ವೀಕರಿಸು"




ಮುಂದಿನ ಸಂಚಿಕೆಯಲ್ಲಿ ....
ಶ್ರೀ ವೇಂಕಟೇಶನ ಇನ್ನೊಂದು ದಿವ್ಯ ಮಹಿಮೆಯನ್ನು ತಿಳಿದು... ಧನ್ಯರಾಗೋಣ!

ಸ್ವಸ್ತಿ

# ಅವಸರ - ಒತ್ತಡ

- ಬಿ. ಆರ್. ಶ್ರೀಕಂಠಯ್ಯ

ಮಕ್ಕಳೆ, ಅವಸರ, ಅಂದರೇನು ನಿಮಗೆ ತಿಳಿದಿದೆ ಮತ್ತು ಅನುಭವವಾಗಿದೆಯಲ್ಲದೆ. ಅವಸರ, ಎಲ್ಲದಕ್ಕೂ ಓಡುವುದು. ಶಾಲೆಯ ವಾಹನ ಹತ್ತಲು ಓಡುವುದು. ಶಾಲೆಗೆ ಹೊತ್ತಾಯಿತು ಎಂದು ಓಡುವುದು. "ಹೋಮ್‌ವರ್ಕ್" ಅವಸರದಲ್ಲಿ ಮಾಡುವುದು. ಅವಸರದಲ್ಲಿ ಇಟ್ಟ ನಿಮ್ಮ ವಸ್ತುಗಳಿಗೆ ಹುಡುಕಾಟ. ಟೈಮ್ ಟೇಬಲ್ ಪ್ರಕಾರ ಪುಸ್ತಕ ಜೋಡಿಸಲು ಅವಸರ. ಅವಸರದಲ್ಲಿ ಯಾವುದೋ ಪುಸ್ತಕ ತೆಗೆದುಕೊಳ್ಳುವುದು. ಇದೆಲ್ಲ, ಅವಸರದಲ್ಲಿ ಮಾಡುವ ಕಾರ್ಯಗಳು, ಇದರಿಂದ ನಿಮ್ಮ ಮನಸ್ಸಿನಲ್ಲಿ ಒಂದು ರೀತಿಯ "ಒತ್ತಡ" (ಟೆನ್ಷನ್) ಪ್ರಾರಂಭವಾಗುತ್ತದೆ. ಇದರಿಂದ, ವಿದ್ಯಾರ್ಥಿಗಳಲ್ಲಿ ಬಹಳ ಬದಲಾವಣೆಯಾಗುತ್ತದೆ. ಈ ಅವಸರ, ನಿಮ್ಮ ಮನಸ್ಸಿನ ಮೇಲೆ ಬಹಳ ಪರಿಣಾಮ ಬೀರುತ್ತದೆ. ಈ ಅವಸರದಿಂದ, ಮನಸ್ಸಿನಲ್ಲಿ "ಒತ್ತಡ - ಸ್ಟ್ರೆಸ್", ಪ್ರಾರಂಭವಾಗುತ್ತದೆ. ಇದರಿಂದ, ಮರೆವು ಬರುತ್ತದೆ, ಓದಿದ್ದ ವಿಷಯಗಳು ಮರೆತುಹೋಗುತ್ತದೆ ಮತ್ತು ಗೊಂದಲವಾಗುತ್ತದೆ. ನೀವು, ಹಗಲು ರಾತ್ರಿ ನಿದ್ದೆಕೆಟ್ಟು ಓದಿದ್ದೆಲ್ಲ ಮರೆತು ಹೋಗುತ್ತದೆ. ಇದರ ಅನುಭವ ನಿಮಗೆ ಮತ್ತು ನಿಮ್ಮ ಸ್ನೇಹಿತರಿಗೆ ಆಗಿದೆಯಲ್ಲವೆ ಮಕ್ಕಳೇ ॥. ಈ ಅವಸರ ಮಕ್ಕಳಿಂದ, ಹಿರಿಯರವರೆಗೂ ಇದೆ. ನಿಮ್ಮ ಅಮ್ಮನ ಅವಸರ ನೀವು ನೋಡಿರಬಹುದು. ನಿಮಗೆ "ತಿಂಡಿ ಡಬ್ಬಿ", "ನೀರಿನ ಬಾಟಲ್", ಕೊಡುವಾಗ, ಮತ್ತು ನಿಮ್ಮನ್ನು ಶಾಲೆಯ ವಾಹನ ಹತ್ತಿಸುವವರೆಗೂ, ಅಮ್ಮನಿಗೆ ಅವಸರವೇ, ಅವಸರ, ಇದರಿಂದ ಅಮ್ಮನಿಗೂ ಒತ್ತಡ ಮತ್ತು ನಿಮಗೂ ಒತ್ತಡ.

ಯೋಚಿಸಿ ಮಕ್ಕಳೆ, ಈ ಅವಸರದಲ್ಲಿ ಮಾಡುವ ಕೆಲಸವನ್ನು, ನೀವು ತಡೆಯಬಹುದಲ್ಲವೇ, ನಿಮ್ಮ ಸ್ನೇಹಿತರು ಅವಸರವಿಲ್ಲದೆ, ಆರಾಮವಾಗಿರುವುದನ್ನು ನೀವು ನೋಡಿದ್ದೀರಲ್ಲವೆ. ಹೇಗೆ ಅವಸರವಿಲ್ಲದೆ ನಮ್ಮ ಕೆಲಸಗಳನ್ನು ಮಾಡುವುದು ಹೇಗೆ ಎಂದು "ತಿಂಕ್" ಮಾಡಬೇಡಿ, ಇದು ವೆರಿಸಿಂಪಲ್, ನಿಮ್ಮ ದಿನಚರಿಯಲ್ಲಿ ಸ್ವಲ್ಪ ಬದಲಾವಣೆ ಮಾಡಿಕೊಂಡರೆ ಸಾಕು, ನಿಮಗೆ ಅವಸರವಿರುವುದಿಲ್ಲ ಮತ್ತು ನೋ ಟೆನ್ಷನ್. ಹಾಗೆಯೆ ನಿಮಗೆ 'ನೋ' ಟೈಮ್ ಎಂಬುದೆ ಇರುವುದಿಲ್ಲ. ನೀವು ಆಟ ಆಡಬಹುದು, ನಿಧಾನವಾಗಿ ಊಟ ಮಾಡಬಹುದು ಮತ್ತು ಎಲ್ಲಕಿಂತ ನಿಮ್ಮ "ಹೋಮ್ ವರ್ಕ್' ಅವಸರವಿಲ್ಲದೆ ಮಾಡಿಕೊಳ್ಳಬಹುದು. ನಿಮಗೆ ಆರಾಮವಾಗಿರುತ್ತದೆ. ಇದರಿಂದ ಏನು ಪ್ರಯೋಜನ, ನೀವು ಒಂದು ಸಾರಿ ಓದಿದರೆ ಸಾಕು, ಮರೆಯುವುದಿಲ್ಲ ಮತ್ತು ನಿದ್ದೆಕೆಟ್ಟು ಓದಬೇಕಾಗಿಲ್ಲ. ಸುಮ್ಮನೆ ನೀವು ಓದಿದನ್ನು ಮೆಲಕು ಹಾಕಿದರೆ ಸಾಕು. ನಿಮಗೆ ಓದಿದ್ದೆಲ್ಲ ಮನಸ್ಸಿಗೆ ಬರುತ್ತದೆ, ಹಾಗೆಯೇ ಜ್ಞಾಪಕ ಶಕ್ತಿ ಜಾಸ್ತಿಯಾಗು

ತ್ತದೆ. ಇದರಿಂದ ನಿಮ್ಮ ಪರೀಕ್ಷೆಯಲ್ಲಿ ಮತ್ತು ಟೆಸ್ಟಿನಲ್ಲಿ ಚೆನ್ನಾಗಿ ಬರೆಯುತ್ತೀರ, ಯಾವಾಗಲೂ "ಎ ಪ್ಲಸ್ಸ್" ಮತ್ತು "ಔಟ್ ಸ್ಟಾಂಡಿಂಗ್" ಪಡೆಯುತ್ತೀರ.

ದಿನಚರಿ ಬದಲಾವಣೆ ಎಂದರೆ, ದೊಡ್ಡ ಬದಲಾವಣೆ ಏನಿಲ್ಲ, ಬಹಳ "ಸಿಂಪಲ್".ನೀವು ಈಗಿನ ದಿನಚರಿಯನ್ನು ಬರೆದುಕೊಳ್ಳಿ ಮತ್ತು ಅದರಲ್ಲಿ ಯಾವುದು ನಿಮ್ಮ ವಿದ್ಯಾರ್ಥಿ ಜೀವನಕ್ಕೆ ಅನವಶ್ಯಕ ಎಂಬುದನ್ನು ತೆಗೆದುಹಾಕಿ, ಆಗ ನಿಮಗೆ ಅರ್ಥವಾಗುತ್ತದೆ. ಕಾಲ (ಟೈಂ) ಅಮೂಲ್ಯ ಎಂದು ತಿಳಿದುಬರುತ್ತದೆ. ಮೊಬೈಲ್‌ಗಳ ಉಪಯೋಗ ಮತ್ತು ಟಿ.ವಿ. ನೋಡುವುದನ್ನು ಆದಷ್ಟು ಕಮ್ಮಿ ಮಾಡಿ. ಆ ಕಾಲವನ್ನು ಸದುಪ ಯೋಗ ಮಾಡಿಕೊಳ್ಳಿ. ಬೇಗ ಮಲಗಿ ಮತ್ತು ಬೇಗ ಏಳಿ, ಬೆಳಗಿನ ವೇಳೆ ಹತ್ತು ನಿಮಿಷ "ಮೌನ" ಅಥವಾ "ಧ್ಯಾನ" ಮಾಡಿ. ಆಗ ಅದರ ಮಜ ನಿಮಗೆ ಅರ್ಥವಾಗುತ್ತದೆ. ಇದರಿಂದ ನೀವು ದಿನವಿಡೀ "ಚಾರ್ಜ್' ಆಗಿರು ತ್ತೀರ, ನಿಮಗೆ ಬೇಜಾರು ಅಥವಾ 'ಬೋರಿಂಗ್" ಅನ್ನಿಸುವುದಿಲ್ಲ. ಎಲ್ಲದ ರಲ್ಲೂ ಉಲ್ಲಾಸವಿರುತ್ತದೆ. ತರಗತಿಯಲ್ಲಿ ನೀವು "ಫ್ರೆಷ್' ಆಗಿರುತ್ತೀರ, ನಿಮಗೆ "ಕಾನ್ಸೆಂಟ್ರೇಷನ್' ಇರುತ್ತದೆ. ಇದರಿಂದ ಟೀಚರ್ ಹೇಳಿದ ಪಾಠ ಚೆನ್ನಾಗಿ ಅರ್ಥವಾಗುತ್ತದೆ ಮತ್ತು ಮನಸ್ಸಿನಲ್ಲಿ ಉಳಿಯುತ್ತದೆ, ಮನೆಗೆ ಬಂದು ಒಂದು ಸಾರಿ ಮನಸ್ಸೆಂಬ ಕಂಪ್ಯೂಟರ್‌ನಲ್ಲಿ ಸ್ಟೋರ್ ಆಗಿರುವ ಪಾಠವನ್ನು ರಿಟ್ರೀವ್ ಮಾಡಿ ನಿಮ್ಮ ಕ್ಲಾಸಿನ ನೋಟ್ಸ್ ಜೊತೆ ನೋಡಿ ಕೊಂಡರೆ ಸಾಕು, ನೀವು ಮರೆಯಲು ಸಾಧ್ಯವೇ ಇಲ್ಲ. ಹೀಗೆ ಮಾಡಿ ನೋಡಿ ಮಕ್ಕಳೇ,ನಿಮಗೆ ಅರ್ಥವಾಗುತ್ತದೆ. ಬೇಗನೆ ಮಲಗಿ, ಮಲಗುವ ಮುನ್ನ ನಾಳೆಯ "ಟೈಮ್ ಟೇಬಲ್' ಪ್ರಕಾರ ಪುಸ್ತಕ ಜೋಡಿಸಿಕೊಳ್ಳಿ (ಅನವಶ್ಯಕವಾದ ಪುಸ್ತಕಗಳು ಬೇಡ) ಇದರಿಂದ ನಿಮ್ಮ ಶಾಲೆಯ ಚೀಲದ ಬಾರ ಕಮ್ಮಿಯಾಗುತ್ತದೆ.

ಮಲುಗುವ ಮುನ್ನ, ಸಣ್ಣ ಮೆಲುದನಿಯಲ್ಲಿ ನಿಮಗೆ ಇಷ್ಟವಾದ 'ಮ್ಯೂಸಿಕ್' ಕೇಳುತ್ತಾ ಇರಿ, ನಿಮಗೆ ಅರಿವಿಲ್ಲದೆಯೇ ನಿದ್ದೆ ಬರುತ್ತದೆ. ಬೆಳಿಗ್ಗೆ ನಿಮಗೆ ಅಲಾರಮ್ ಇಲ್ಲದೆ ಎಚ್ಚರವಾಗುತ್ತದೆ. ಮರಿಬೇಡಿ, ಮಲುಗುವ ಮುನ್ನ, ನಾಳೆ ಬೆಳಗಿನ ತಿಂಡಿ ಮತ್ತು ಡಬ್ಬಿಗೆ ಏನಬೇಕು ಎಂದು ಅಮ್ಮನಿಗೆ ಹೇಳಿಬಿಡಿ. ಆಗ ಅಮ್ಮನಿಗೂ ಮತ್ತು ನಿಮಗೂ ಅವಸರ ವಿಲ್ಲ ಮತ್ತು ಒತ್ತಡವಿಲ್ಲ.ನೀವು ಆರಾಮವಾಗಿದ್ದರೆ, ಅಮ್ಮ - ಅಪ್ಪನಿಗೆ ಸಂತೋಷ. ಯೋಚನೆ ಮಾಡಿ ಮಕ್ಕಳೇ ಇದು ಸಾಧ್ಯ ಅಲ್ಲವಾ?.

ಮಕ್ಕಳೇ, ಅವಸರದಿಂದ, ಆಗುವ ಅನಾಹುತಗಳನ್ನು ನೀವು ನೋಡಿದ್ದೀರಿ ಮತ್ತು ಕೇಳಿದ್ದೀರಿ, ರಸ್ತೆಯಲ್ಲಿ ಆಗುವ ಅಪಘಾತ, ಕೋಪ, ಕ್ರೋಧ, ಇದರಿಂದ ಆಗುವ ಪರಿಣಾಮ ಆರೋಗ್ಯದಲ್ಲಿ ಏರುಪೇರು, ರಕ್ತದ ಒತ್ತಡ ಇತ್ಯಾದಿ ಎಲ್ಲವು 'ಅವಸರ' ದಿಂದ ಆಗುವ "ಒತ್ತಡ" ದ ಪರಿಣಾಮ.ಅದರಿಂದ, ಸರಿಯಾದ ದಿನಚರಿಯಿಂದ ನಮ್ಮ ಅವಸರ ವನ್ನು ಕಡಿಮೆ ಮಾಡಿಕೊಳ್ಳಬಹುದಲ್ಲವೆ ಮಕ್ಕಳೇ?



# ಪ್ರಜ್ಞಾವಂತ ಬಾಲಕಿ

**ಹೆಸರು :** ಅನಘ . ಎ.

**ತರಗತಿ : -** 9 ನೇ ತರಗತಿ

**ಹುಟ್ಟಿದ ದಿನಾಂಕ :** 11.05.2007

**ತಂದೆಯ ಹೆಸರು :** ವಿ. ಅರುಣ್‌ಕುಮಾರ್

**ತಾಯಿಯ ಹೆಸರು :** ಶ್ರೀಮತಿ. ವಿ. ಸುಧಾ

**ಪಾಠಶಾಲೆ :** ಮಹಿಳಾಲಯಂ ಶಾಲೆ ಅಲುವ, ಕೇರಳ.

**ವಿಶೇಷ ಪ್ರತಿಭೆ :** ಶಾಸ್ತ್ರೀಯ ಸಂಗೀತ, ವಯೋಲಿನ್, ಶಾಸ್ತ್ರೀಯ ನೃತ್ಯ (ಭರತ ನಾಟ್ಯ ಮೊಹಿನಿಅಟ್ಟಂ, ಕೂಚುಪುಡಿ)

ಈ ಬಾಲಕಿಯು ಭಾರತ ದೇಶದ ಸಂಸ್ಕೃತಿಯನ್ನು ಎಲ್ಲೆಡೆ ಪಸರಿಸಬೇಕೆಂಬ ಹಂಬಲವನ್ನು ಹೊತ್ತಿದಳು.

ಅನಘ, ಶಾಸ್ತ್ರೀಯ ಸಂಗೀತವನ್ನು ತನ್ನ ಮೂರನೆಯ ವಯಸ್ಸಿನಲ್ಲೇ ಪ್ರಾರಂಭಿಸಿದಳು, ಮತ್ತು ತನ್ನ ಗುರುಗಳಾದ ಶ್ರೀಮತಿ. ಶ್ಯಾಮ ಹರಿದಾಸರ ಮಾರ್ಗದರ್ಶನದಲ್ಲಿ ಹತ್ತು ಹಲವೆಡೆ ಪ್ರದಶನವನ್ನು ನೀಡಿದ್ದಾಳೆ. ಶಾಲೆಯಲ್ಲಿ ನಡೆದ ಸಂಗೀತ ಸ್ಪರ್ಧೆಗಳಲ್ಲಿ, ಸಂಗೀತ ಪ್ರಕಾರ ಯಾವುದೇ ಇರಲಿ ಅಂದರೇ ಸುಗಮ ಸಂಗೀತ, ಶಾಸ್ತ್ರೀಯ ಸಂಗೀತ,ಲಲಿತ ಸಂಗೀತ ಮುಂತಾದ ಸ್ಪರ್ಧೆಗಳಲ್ಲಿ ಭಾಗವಹಿಸಿ ಪ್ರತಿಬಾರಿಯೂ ಮೊದಲನೆಯ ಪ್ರಶಸ್ತಿಯನ್ನು ಪಡೆದಿರುತ್ತಾಳೆ. ಆಕೆ ಇದೆ ರೀತಿ ಯುವಜನ ಉತ್ಸವ ದಲ್ಲಿ ಶಾಲೆಯನ್ನು ಪ್ರತಿನಿಧಿಸಿದ್ದಾಳೆ.

ಇಷ್ಟೇ ಅಲ್ಲದೆ ಈಕೆ ವಯೋಲಿನ್ ವಾದ್ಯಗಾರಿಕೆಯನ್ನು ಶ್ರೀಮತಿ ಗೀತಾ ಪರಮೇಶ್ವರನ್ ಅವರ ಮಾರ್ಗದರ್ಶನದಲ್ಲಿ ಸಾಧನೆ ಮಾಡುತ್ತಿದ್ದಾಳೆ.

ಜೊತೆಗೆ ಭರತ ನಾಟ್ಯ, ಕೂಚುಪುಡಿ, ಮೊಹಿನಿ ಅಟ್ಟಂ ಮುಂತಾದ ನಾಟ್ಯ ಕಲೆಗಳನ್ನು ಗುರುಗಳಾದ ಶ್ರೀಮತಿ ಸುಧಾ ಪೀತಾಂಬರಮ್ ಅವರ ಶಾಲೆ ಶ್ರೀ ಶಂಕರ ಸ್ಕೂಲ್ ಆಫ್ ಡ್ಯಾನ್ಸ್, ಕಾಲಡಿಯಲ್ಲಿ ಕಲಿಯುತ್ತಿದ್ದಾಳೆ. ಆಕೆ ನೃತ್ಯ ಕಲೆಯನ್ನು ಐದು ವರ್ಷಗಳಿಂದ ಸತತವಾಗಿ ಅಭ್ಯಾಸ ಮಾಡುತ್ತಿದ್ದಾಳೆ, ಮತ್ತು ಅದರ ಐದು ಹಂತಗಳನ್ನು ಪೂರೈಸಿದ್ದು 2017 ರಲ್ಲಿ ಕಾಲಡಿಯಲ್ಲಿ ನಡೆದ ಅಂತರಾಷ್ಟ್ರೀಯ ನೃತ್ಯೋತ್ಸವದಲ್ಲಿ ತನ್ನ ಮೊದಲ ಪ್ರದರ್ಶನ ನೀಡುವ ಮೂಲಕ ನೃತ್ಯ ರಂಗಕ್ಕೆ ಪಾದಾರ್ಪಣೆ ಮಾಡಿದ್ದಾಳೆ. ಅದೇ ನಿಟ್ಟಿನಲ್ಲಿ 2018 ರಲ್ಲಿ ಚೊಟ್ಟನಿಕ್ಕರ ಭಗವತಿ ದೇವಸ್ಥಾನ, ಕೊಲ್ಲೂರು ಮೂಕಾಂಭಿಕ ದೇವಸ್ಥಾನದ ನವರಾತ್ರಿ ಉತ್ಸವದಲ್ಲಿ ಹಾಗೂ ಗುರುವಾಯೂರಪ್ಪ ಕೃಷ್ಣನ ದೇವ ಸ್ಥಾನದಲ್ಲಿ, ಕಾಲಡಿ ಕೃಷ್ಣನ ದೇವಸ್ಥಾನ ಹಾಗೂ ಪಲ್ಲಿಪಟ್ಟುಕವದೇವಿ ದೇವಸ್ಥಾನ ಮೊದಲಾದ ಕಡೆಗಳಲ್ಲಿ ತನ್ನ ನೃತ್ಯ ಪ್ರದಶನವನ್ನು ನೀಡಿ ಸೈ ಎನಿಸಿಕೊಂಡಿದ್ದಾಳೆ. ಹಾಗೆಯೇ ಅನೇಕ ಹೆಣ್ಣು ಮಕ್ಕಳಿಗೆ ಮಾದರಿಯಾಗಿದ್ದಾಳೆ. ಇಂತಹಾ ಪ್ರಜ್ಞಾವಂತ ಬಾಲಕಿಗೆ ಕಲಿಯುಗ ಪ್ರತ್ಯಕ್ಷ ದೈವವಾದ ಶ್ರೀ ತಿರುಮಲೆ ವೇಂಕಟೇಶ್ವರನು ಚಿರಕಾಲ ಹರಸಲಿ ಎಂದು ಹಾರೈಸೋಣ.

# ಕ್ವಿಜ್

-ನಿರ್ವಹಣೆ ಶ್ರೀಮತಿ. ಸೂರ್ಯವಂಶಿ

1) 'ಕೂರ್ಮಾವತಾರ'ದಲ್ಲಿ ಭಗವಂತನು ತನ್ನ ಬೆನ್ನ ಮೇಲೆ ಹೊತ್ತ ಪರ್ವತದ ಹೆಸರೇನು?

ಅ) ಮಹೇಂದ್ರ ಪರ್ವತ ಆ) ಗೋವರ್ಧನ ಪರ್ವತ

ಇ) ಮಂದರ ಪರ್ವತ ಈ) ವಿಂದ್ಯಾ ಪರ್ವತ

2) 'ಆದಿವರಹಾ ಕ್ಷೇತ್ರ' ವೆಂದು ಪ್ರಸಿದ್ಧಿ ಪಡೆದಿರುವ ಕ್ಷೇತ್ರ ಯಾವುದು?

ಅ) ಸಿಂಹಾಚಲ ಆ) ಇಂದ್ರಕೀಲಾದ್ರಿ

ಇ) ಮೈಸೂರು ಈ) ತಿರುಮಲೆ

3) 'ನಾರಸಿಂಹಾವತಾರ'ದಲ್ಲಿ ಭಗವಂತನು ಸಲುಹಿದ ಬಾಲಕನ ಹೆಸರೇನು?

ಅ) ಧೃವ ಆ) ಪ್ರಹ್ಲಾದ

ಇ) ಸುಧಾಮ ಈ) ಹಿರಣ್ಯಾಕ್ಷ

4) ಪರಶುರಾಮನ ತಂದೆಯ ಹೆಸರೇನು?

ಅ) ಅಶ್ವತ್ಥಾಮ ಆ) ಅಗಸ್ತ್ಯ

ಇ) ಜಮದಗ್ನಿ ಈ) ಗೌತಮ

5) ಪರಶುರಾಮನ ತಾಯಿಯ ಹೆಸರೇನು?

ಅ) ಅದಿತಿ ಆ) ಗಂಗೆ

ಇ) ರೇಣುಕಾದೇವಿ ಈ) ಕುಂತಿ

6) ಜಮದಗ್ನಿಯನ್ನು ಕೊಂದ ರಾಜ ಯಾರು?

ಅ) ದಶರಥ ಆ) ಕೌಶಿಕ

ಇ) ಹಿಮವಂತ ಈ) ಕಾರ್ತಿವೀರ್ಯಾರ್ಜುನ

7) ಪರಶುರಾಮನ ಆಯುಧ ಯಾವುದು?

ಅ) ಗದೆ ಆ) ಖಡ್ಗ

ಇ) ಕೊಡಲಿ ಈ) ಸುದರ್ಶನ ಚಕ್ರ

• • • • • • • • • • • •

ಉತ್ತರಗಳು:

1) ಇ 2) ಈ 3) ಆ 4) ಇ 5) ಇ 6) ಈ 7) ಇ

# ಚಿತ್ರಲೇಖನ

ಈ ಗೊಂಬೆಗೆ ಬಣ್ಣವನ್ನು ತುಂಬಿರಿ.......



ಮೇಲಿನ ಗೊಂಬೆಯನ್ನು ಕೆಳಗಿನ ಬಾಕ್ಸ್‌ನಲ್ಲಿ ಬರಿಯೋಣ...





ಸ್ವಾಮಿಯವರ ಮೆಟ್ಲೋತ್ಸವದಲ್ಲಿ ಬಾಲ ಬಾಲಿಕಿಯರು

SAPTHAGIRI (KANNADA) ILLUSTRATED MONTHLY Published by Tirumala Tirupati Devasthanams
printing on 30-07-2020. Regd. with the Registrar of Newspapers under
"RNI" No.10742, Postal Regd.No.TRP/14 - 2018-2020
Licensed to post without prepayment No.PMGK/RNP/WPP-04/2018-2020



ನಿತ್ಯಾಯ ನಿರವದ್ಯಾಯ ಸತ್ಯಾನಂದ ಚಿದಾತ್ಮನೇ ।
ಸರ್ವಾಂತರಾತ್ಮನೇ ಶ್ರೀ ಮದ್ವೇಂಕಟೇಶಾಯ ಮಂಗಳಂ ॥